KARNATAKA ESSENTIAL SERVICES MAINTENANCE BILL (*contd*)

† ಶ್ರೀ ಆರ್. ಗುಂಡೂರಾವ್ (ದೇವದುರ್ಗ): ಸಭಾಧ್ಯಕ್ಷರೇ, ಶುಕ್ರವಾರ ೭–೭ ಗಂಟೆಗಳಿಂದ ಹೆಚ್ಚಿನ ಕಾಲ ಈಗತ್ಯ ಸೇವಾ ನಿರ್ವಹಣೆ ಮಸೂದೆ ಬಗ್ಗೆ ಚರ್ಚೆ ನಡೆಯಿತು. ಈ ಮಸೂದೆ ಬಿಡುಸ ಸರ್ಕಾರದ್ದೆಯೇ ಮಂಡಿಸಲ್ಪಟ್ಟಿದ್ದು. ಈ ಮಸೂದೆಯು ಮಾನ್ಯ ಸದಸ್ಯರುಗಳು ಹಾಗೂ ಸನ್ಮಾನ್ಯ ವಿರೋಧಪಕ್ಷದ ನಾಯಕರೂ ಸೇರಿ ಇಡೀ ಸದಿಸ್ಸಾರದಾಗಿ ಕಾರ್ಮಿಕರ ಹಿತಚಿಂತನೆಗೆ ಈ ಒಂದು ದೃಷ್ಟಿಯಿಂದ ಮಂಡಿಸಲ್ಪಟ್ಟ ಉತ್ತಮ ಉದ್ದೇಶದಿಂದ ಈ ಸದನದಲ್ಲಿ ಶಾಂತಿ ಭಂಗವಾಗುತ್ತದೆಂದೂ, ಅಲ್ಲದೆ ಈ ಬಿಲ್ಲು ಶಾಸನ ಕಲಂಳ ಶಾಸನವಾಗುವುದೆಂದು ಹೇಳಿದ್ದಾರೆ. ಈ ಒಂದು ಮಸೂದೆಯು ಮಂತ್ರಿಕ ವಿಪರೀತ ಅಧಿಕಾರವನ್ನು ಪೋಲೀಸರಿಗೆ ಕಾಯ್ದೆ ಮಾನ್ಯನೇಜ್‌ಮೆಂಟಿನವರಿಗೆ ಕೊಟ್ಟುಬಿಟ್ಟಿದ್ದಾರೆಂದು ಕೂಡ ಹೇಳಿದ್ದಾರೆ ಸ್ವಾಮಿ, ನಾನು ಇಷ್ಟೊಂದು ಪೆ ರೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸರ್ವ ಸಾಧಾರಣವಾಗಿ ಈ ಬಿಲ್ಲಿನ ಮುಖಾಂತರ ಯಾವುದೇ ಒಂದು ಸೇವೆಯಲ್ಲಿ ತೊಡಗಿರುವ ಸದಸ್ಯರುಗಳು ಸಲಹೆಗಳನ್ನು ಕೊಡುತ್ತಾ, ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ, ಸರ್ಕಾರಕ್ಕೆ ವಿಪರೀತ ಅಧಿಕಾರವನ್ನು ಕೊಟ್ಟಿರುವುದರಿಂದ ಕಾರ್ಮಿಕರು ಚಿಲ್ಲರೆಯಾಗಿ ಕಾರ್ಯಾಗಿ ದುರುಪಯೋಗವಾಗುವುದಕ್ಕೆ ಅವಕಾಶ ಇದೆಯೆಂದು ಹೇಳಿದ್ದಾರೆ. ಈ ಬಿಲ್ಲಿನಿಂದ ಜಾರಿಯಲ್ಲಿ ಬಂದರೆ ಕಾರ್ಮಿಕರ ಬಾಕ್ಕೆ ಧಕ್ಕೆಯಾಗಿ ಅವರ ಜೀವನ ಅಲ್ಲೋಲಕಲ್ಲೋಲವಾಗಿ ರಾಜ್ಯಕ್ಕೆ ಧಕ್ಕೆಯಾಗುತ್ತದೆಂದು ವಿರೋಧಪಕ್ಷದ ನಾಯಕರು ಸರ್ಕಾರಕ್ಕೆ ಎಚ್ಚರಿಕೆ ರೀತಿಯಲ್ಲಿ ಹೇಳಿದ್ದಾರೆ. ಸಂತೋಷ, ನಾನು ಈ ಸದರ್ಭದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ಮಸೂದೆಯನ್ನು ಮಂಡಿಸಿದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿರಲಿಲ್ಲ ಇಲ್ಲರು ಈ ಮಾತನ್ನು ಆವರೇ ಹೇಳಿದ್ದಾರೆ, ನಾನೇ ಮಂಡಿಸಿದೆ. ಕಾರಣಾಂತರದಿಂದ ನಾನು ಈ ಮಸೂದೆಯನ್ನು ಜಾರಿಗೆ ತರಲಕ್ಕೆ ಒಪ್ಪಲಿಲ್ಲ ಎಂದು ಹೇಳಿದ್ದಾರೆ. ನಾನು ಹಿಂದಿನ ಮಂತ್ರಿಮಂಡಲದಲ್ಲಿ ಸಾರಿಗೆ ಮಂತ್ರಿಯಾಗಿದ್ದಾಗ ಈ ಒಂದು ಮಸೂದೆಯನ್ನು ತರಬೇಕೆಂದು ಅನೇಕ ಸಲಹೆಗಳನ್ನು ಕೊಟ್ಟಿದ್ದೆ. ಏನಕ್ಕೊಸ್ಕರ ಕೊಟ್ಟಿದೆ ಅಂದರೆ ಕಾರ್ಮಿಕರ ಮೇಲೆ ಹೆಚ್ಚಿನ ಅಧಿಕಾರ ಇನ್ನು ಕೊಳ್ಳಬೇಕೆಂದಾಗಲೀ, ಅವರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳಬೇಕೆಂದಾಗಲೀ, ಇಡೀ ಕಾರ್ಮಿಕ ವರ್ಗವನ್ನು ದಸ್ತಗಿರಿ ಮಾಡಿ ಜೈಲಿಗೆ ಹಾಕಬೇಕೆಂದಾಗಲೀ ಸಲಹೆಗಳನ್ನು ಕೊಟ್ಟಿರಲಿಲ್ಲ. ಈ ಮಸೂದೆಯನ್ನು ಸದಾನಂದ ಮಂತ್ರಿ ಈ ರೀತಿ ತರಬೇಕಾದರೆ ಈ ಮಸೂದೆಯ ಬಗ್ಗೆ ಸಾಕಷ್ಟು ವಿಚಾರ ಗಾಡಿ ಮಂತ್ರಿಮಂಡಲದಲ್ಲಿ ಚರ್ಚೆ ಗಾಡಿ, ಸಾಧ್ಯವಾದಷ್ಟು ಅಧಿಕಾರಿಗಳಲ್ಲಿ ಚರ್ಚೆ ಮಾಡಿ, ಕಾರ್ಯಾಂಗದ ಅಧಿಕಾರಿಗಳಲ್ಲಿ ಚರ್ಚೆ ಗಾಡಿ ಈ ಮಸೂದೆಯನ್ನು ತಂದು ಮಂಡಿಸಿದ್ದೆನೆ ಹೊರತು ನಾನು ಹಿಂದೆ ಸಾರಿಗೆ ಮಂತ್ರಿಯಾಗಿದ್ದಾಗ ಇಂಥ ಒಂದು ಮಸೂದೆಯನ್ನು ತರಬೇಕೆಂದು ಪ್ರಸ್ತಾಪ ಮಾಡಿದ್ದಾಗ ಈ ದೇಶದಲ್ಲಿ ಬಹುಪಾಲು ಮಿಸ್ಟೇಕ್ ಇಲ್ಲ ಎನ್ನುವುದು ಮಾನ್ಯ ಸದಸ್ಯರಿಗೆ ತಿಳಿದೇ ಇಲ್ಲ. ಸಾರಿಗೆ ಸಂಸ್ಥೆಯ ಮುಷ್ಕರ ಬಂದಾಗ ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಎಷ್ಟು ಜನ ಸಂಸಾರಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ ಎನ್ನುವುದನ್ನೆ ನಾನು ಹೇಳಬೇಕಾಗಿಲ್ಲ. ಕಾರ್ಮಿಕರಿಗೆ ಇರತಕ್ಕ ಮೂಲಭೂತ ಹಕ್ಕುಗಳನ್ನು ಸರ್ಕಾರ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾನು ಹಿಂದಿನ ಅಲ್ಲದೆ ಹೊರದೇಶ ನನ್ನ ರಾಜಕೀಯ ಜೀವನದಲ್ಲಿ ಕಾರ್ಮಿಕ ವರ್ಗಕ್ಕೆ ಎಷ್ಟು ಹಕ್ಕು ಕೊಟ್ಟಿದ್ದಾರೆ, ಬೇರೆ ಕಾರ್ಮಿಕರಿಗೆ ಎಷ್ಟು ಹಕ್ಕು ಕೊಟ್ಟಿದ್ದಾರೆ. ಸಂಘಟಿತ ಕಾರ್ಮಿಕರಿಗೆ ಎಷ್ಟು ಹಕ್ಕನ್ನು ಕೊಟ್ಟಿದ್ದಾರೆ. ಸರ್ಕಾರದ ಅಧಿಕಾರಿಗಳಿಗೆ ಎಷ್ಟು ಹಕ್ಕನ್ನು ಕೊಟ್ಟಿದ್ದಾರೆಯೆನ್ನುವುದನ್ನು ತಿಳಿದುಕೊಂಡಿದ್ದೇನೆ. ಈ ಮಸೂದೆಯನ್ನು ರಾಜಕೀಯದಲ್ಲಿ ಬೆರೆತು ಹೋಗಿಯೋ ಅಥವಾ ಹಾಗೂ ಇಡಿದ್ದೇನೆ. ಎಂದು ಹೇಳಿಕೊಳ್ಳುವುದಿಲ್ಲ. ಹೆಸರೂ ಕೂಡ ಇನ್ನಿರಲಿಲ್ಲ. ಸರ್ಕಾರದಲ್ಲಿ ವಿರೋಧಪಕ್ಷ ಬೆರೆ ಇಲ್ಲ. ಎಲ್ಲ ರೀತಿಯ ಕಾರ್ಮಿಕ ವರ್ಗಕ್ಕೂ ಸಹಕಾರ ಸೌಲಭ್ಯಗಳನ್ನು ಕೆಳಕ್ಕೆ ಹಕ್ಕು ಬಿಲ್ಲುರಿಗೂ ಇದೆ. ತಾವು ರಾಜಕೀಯ ಮಾಡುವುದಕ್ಕೆ ಹೊರಟರೆ ನಾವು ತಯಾರಿದ್ದೇವೆ. ಕಾರ್ಮಿಕ ನಾಯಕರು ಎಂದು ಹೇಳಿಕೊಂಡು ಕಾರ್ಮಿಕರಲ್ಲಿ ವೈರತ್ವವನ್ನು ಬೆಳೆಸುವುದು, ಕಾರ್ಮಿಕರ ಸಂಘಟನೆ ಹಿರಿಯದವರು ಕಾರ್ಮಿಕರ ಮುಂದಿಡಲಾಗಿ ಕೆಲಸ ಮಾಡ್ದವರು ಇವೆಲ್ಲಾ ಇಂದು ಕಾರ್ಮಿಕ ಸಮುದಾಯದಲ್ಲಿ ಅಸಂತೋಷ ಬೆಳೆಯುವುದಕ್ಕೆ ದಾರಿಯಾಗಿವೆ. ಕಾರ್ಖಾನೆಗಳ ಮಾಲೀಕರು ಈ ದೇಶದವರೇ. ಮ್ಯಾನೇಜ್‌ಮೆಂಟಿನವರು ಈ ದೇಶದವರೇ ಕಾರ್ಮಿಕರು ಈ ದೇಶದವರೇ. ಹೊಲದಲ್ಲಿ ತೋಟಗಳಲ್ಲಿ ಕೆಲಸ ಮಾಡುವವರು ಈ ದೇಶದವರೆ. ನಾನು ಪ್ರತಿನಿಧಿಸುತಕ್ಕ ಕ್ಷೇತ್ರ೧೦೦ಕ್ಕೆ ೭೦ ಭಾಗ ಕಾರ್ಮಿಕರು ಇರತಕ್ಕ ಕ್ಷೇತ್ರ. ಕಾರ್ಮಿಕರ ಬಗ್ಗೆ ಕರಾಳ ಶಾಸನವನ್ನು ತಂದು ಈ ಸದನದಲ್ಲಿ ಪಾಸು ಮಾಡಿ ಅಧಿಕಾರ ನಡೆಸಿಕೊಂಡು ಹೋಗಬೇಕಾಗಿಲ್ಲ. ಎಂಥ ಪರಿಸ್ಥಿತಿಯಲ್ಲಿ ಈ

ಮಸೂದೆಯನ್ನು ತರಬೇಕಾಯಿತು, ಬೆಳಿಗ್ಗೆ ೧೧-೦೦ ಗಂಟೆಗೆ ಲೋಕಸೇವಾ ಆಯೋಗದಲ್ಲಿ ಇಂಟರ್‌ವ್ಯೂ ಇರುತ್ತೆ, ಹತ್ತಾರು ವರ್ಷಗಳಿಂದ ಶಾಸಕರ ಮತ್ತು ಮಂತ್ರಿಗಳ ಹಿಂದೆ ಉದ್ಯೋಗಕ್ಕಾಗಿ ಅಲೆದ ಅಲೆದು ಸಾಕಾಗಿ ಹೋಗಿರುತ್ತಾರೆ. ಬೆಳಿಗ್ಗೆ ಇಂಟರ್‌ವ್ಯೂಗೆ ಬರಬೇಕು ಬಸ್ಸುಗಳು ಬರದೇಹೋದರೆ ಇಂಟರ್‌ವ್ಯೂ ಇಲ್ಲದಂತಾಗಿ ನಂದಿ ಬೆಟ್ಟದಲ್ಲಿ ಆತ್ಮಹತ್ಯೆ ಮಾಡಿಕೊಂಡಂತ ಪ್ರಕರಣಗಳು ನಡೆದಿಲ್ಲವೆ? ಆಸ್ಪತ್ರೆಗೆ ಬೆಂಕಾಜನಕ ಪರಿಸ್ಥಿತಿಯಲ್ಲಿ ರೋಗಿಗಳು ಬಂದಿದ್ದರೂ ವೈದ್ಯರ ಉತ್ಪ್ರೇಕ್ಷೆಯಿಂದ ಸಮಯಕ್ಕೆ ಸರಿಯಾಗಿ ಔಷಧೋಪಚಾರಗಳು ನಡೆಯದೆ ಪ್ರಾಣ ಕಳೆದುಕೊಂಡಿರುವ ನಿದರ್ಶನಗಳು ಎಷ್ಟು ? ಕಾರ್ಮಿಕರ ಹೆಂಡತಿಯರು ಸತ್ತು ಹೋಗಿಲ್ಲವೆ, ತಂದೆ ತಾಯಿಗಳು ಸತ್ತು ಹೋಗಿಲ್ಲವೆ, ಅಣ್ಣ ತಮ್ಮಂದಿರು ಸತ್ತುಹೋಗಿಲ್ಲವೆ ?

ಅಧ್ಯಕ್ಷರೆ, ಇವೊತ್ತು ದೇಶದಲ್ಲಿ ಉತ್ಪತ್ತಿ ಹೆಚ್ಚಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀನಿವಾಸ ಆವರು ಮಾತನಾಡುತ್ತಾ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇದು ವಿಶೇಷ ಇದೆ ಎಂದು ಹೇಳಿದರು. ಇದನ್ನು ಇಲ್ಲಿ ಸೇರಿಸಬೇಕಾದರೆ ಅವರೇ ವಿದ್ಯುಚ್ಛಕ್ತಿ ಮಂತ್ರಿಗಳಾಗಿದ್ದರು. ನಾವು ಇದನ್ನು ಇಲ್ಲಿ ತೆಗೆದುಕೊಂಡು ಬಂದು ಯಾವುದೋ ಒಂದು ಕಿರಿಟ ತೆಗೆದುಕೊಳ್ಳ ಬೇಕು ಎಂದು ಮಾಡಿಲ್ಲ. ಪೊಲಿಟಿಕಲ್ ಸರ್ವೀಸಸ್‌ನಲ್ಲಿ ನಾವೆಲ್ಲರೂ ರಾಜಕೀಯದಲ್ಲಿ ನಿಂತಿರುವವರೆ. ಚುನಾವಣೆಯಲ್ಲಿ ಮಾನ್ಯ ದೇವೇಗೌಡರು ಹೇಳಿದ ಹಾಗೆ ವಿಧಾನ ಸಭೆಯಲ್ಲಿ ಒಂದು ಅಭಿಪ್ರಾಯ ವ್ಯಕ್ತ ಪಡಿಸುತ್ತೇವೆ ಹೊರಗಡೆ ಒಂದು ಅಭಿಪ್ರಾಯ ವ್ಯಕ್ತಪಡಿಸುತ್ತೇವೆ. ಒಳಗಡೆ ಒಂದು ನೀತಿ ಇರಬಹುದು ಹೊರಗಡೆ ಒಂದ ನೀತಿ ಇರಬಹುದು. ಮಾನ್ಯ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿ ಈ ಶಾಸನವನ್ನು ತರಬೇಕು ಎಂದು ಪ್ರಯತ್ನಪಟ್ಟಾಗ ಕಮ್ಯೂನಿಸ್ಟ್ ಸ್ನೇಹಿತರ ಬೆಂಬಲ ಅವರಿಗೆ ಬೇಕಾಗಿರಲಿಲ್ಲ. ದೇಶದಲ್ಲಿ ರಾಜಕೀಯ ಬದಲಾವಣೆಯಾಗಿದೆ. ಅವರು ಈ ಜಾಗದಿಂದ ಆಲ್ಲಿಗೆ ಹೋಗಿದ್ದಾರೆ. ಇವೊತ್ತು ಎಲ್ಲಾ ಕಮ್ಯುನಿಸ್ಟರ ಒಪ್ಪಂದ ಪರಿಸ್ಥಿತಿ ಇದೆ, ಆದ್ದರಿಂದ ಇವೊತ್ತು ಕಮ್ಯೂನಿಸ್ಟ್ ಸ್ನೇಹಿತರ ಒಪ್ಪಂದ ಪರಿಸ್ಥಿತಿ ಬಗ್ಗೆ ಕಾರ್ಮಿಕರ ಸಂಘಟನೆ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ ಈ ಒಂದು ಬಿಲ್ಲನ್ನು ನಾನು ಡ್ರಾಫ್ಟ್ ಮಾಡಿದ್ದು ಇಲ್ಲ. ಇದನ್ನು ಡ್ರಾಫ್ಟ್ ಮಾಡಿದ್ದು ಶ್ರೀಮಾನ್ ದೇವರಾಜ್ ಅರಸ್ ಅವರೆ:

ಶ್ರೀ ಡಿ. ದೇವರಾಜ್ ಅರಸ್. ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳುವ ಕೆಲವು ಮಾತುಗಳು ಸತ್ಯಕ್ಕೆ ದೂರವಾದವು. ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅಧಿಕಾರ ಇದೆ ಡಿಫೆಂಡ್ ಮಾಡಿಕೊಳ್ಳಲಿ. ಈ ಕಮ್ಯೂನಿಸ್ಟರ ಸಹಾಯ ಪಡೆಯಲಿಕ್ಕೋಸ್ಕರ ಈ ಬಿಲ್ಲನ್ನು ಆಪೋಸ್ ಮಾಡುತ್ತಿದ್ದೇನೆ ಅಂತ ಏನು ಅಲಿಗೇಷನ್ ಮಾಡುತ್ತಿದ್ದಾರೆ ಇದು ಸತ್ಯಕ್ಕೆ ದೂರವಾದುದು. ನಾನು ಮಾಡಿಸಿದ್ದು ಹೌದು ; ನಾನು ಇಂತಹ ಬಿಲ್ಲನ್ನು ತರಬೇಕು ಅಂತ ಹೇಳಿದರು ತನ್ನಿ ಅಂತ ಹೇಳಿದ್ದು ನಿಜ. ಆದು ಆದಮೇಲೆ ಸ್ವಲ್ಪ ಕಠಿಣವಾಗಿದೆ ಇದರಿಂದ ಅನೇಕ ಕಾರ್ಮಿಕರ ಹಕ್ಕುಗಳಿಗೆ ಧಕ್ಕೆ ಬರುತ್ತದೆ ಅಂತ ಸೂಕ್ಷ್ಮವಾಗಿ ತಿಳಿದಾಗ ಆವೊತ್ತಿನ ದಿನವೆ ಇದನ್ನು ಮುಂದುಪರಿಸಿದ್ದು ; ಕಮ್ಯೂನಿಸ್ಟರ ಸ್ನೇಹ ಪಡೆಯಲಿಕ್ಕೆ ಅಲ್ಲ. ನಿಜಾಂಶ ಏನು ಅಂತ ದಯವಾಡಿ ತಿಳಿಸಿ, ನಿಮ್ಮ ಆಕ್ಷೇಪಣೆ ಏನು ಇದೆ. ಹೇಳಿ. ನಾನು ನಿಮ್ಮನ್ನು ಆಕ್ಷೇಪಣೆ ಮಾಡಿ ಹೇಳಿಲ್ಲ. ಕಾನೂನು ಬದ್ಧವಾಗಿ ಮಾತ್ರ ಮಾತನಾಡಿದ್ದೇನೆ. ಸರ್ಕಾರ ಹೀಗೆ ಮಾಡಿದೆ. ಹಾಗೆ ಮಾಡಿದೆ ಅಂತ ಹೇಳಿಲ್ಲ. ನಾನು ಪಲವು ಬೇರೆ ಮಾರ್ಗಗಳು ಇವೆ ಅಂತ ಹೇಳಿ, ಹೇಳಿದ್ದೇನೆ ಕಮಗೆ ಜನರ ಸೇವೆ ಮಾಡಲಿಕ್ಕೆ ಎಷ್ಟು ಕಳಕಳಿ ಇದೆ ನಮಗೂ ಅಷ್ಟೇ ಇದೆ. ಇವೊತ್ತು ಜನರಿಗೆ ತೊಂದರೆ ಕೊಡಬಾರದು, ಹಾಲಿನ ಡೈರಿ ನಿಲ್ಲಿಸಬಾರದು, ಪ್ರಾಣಿಗಳಿಗೆ ತೊಂದರೆ ಮಾಡಬಾರದು ಅಂತ ಕಮಗೆ ಎಷ್ಟು ಕಳಕಳಿ ಇದೆ ಅದು ನಮ್ಮೆಲ್ಲರಿಗೂ ಇದೆ. ನೀವು ಹಿಡಿದ ಮಾರ್ಗ ಸರಿ ಇಲ್ಲ ಅಂತ ಹೇಳುತ್ತಿದ್ದೇನೆ.

ಶ್ರೀ ಆರ್. ಗುಂಡೂರಾವ್ :- ಸ್ವಾಮಿ, ನಾನು ಅದನ್ನೆಲ್ಲಾ ಹೇಳಿಲ್ಲ ದೇಶದ ಜವಾಬ್ದಾರಿ ನಮಗೂ ನಿಮಗೂ ಎಲ್ಲರಿಗೂ ಇದೆ ಅಂತ ಹೇಳಿದೆ. ನಾನು ವಿತಕ್ಕೆ ಸೇಳಿದೆ ಅಂತ ಅನಂತರ ತಿಳಿಸುತ್ತೇನೆ. ನಿಮ್ಮಲ್ಲಿ ಕೆಲವರು ಭಾಷಣ ಮಾಡುತ್ತಾ ಒಂದು ವಿಚಾರ ಹೇಳಿದರು. ಹಾಲಿನ ಡೈರಿ ಸತ್ಯಾಗ್ರಹ ಕಾರಣಾಂತರಗಳಿಂದ ಆಗಿದ್ದರೆ ಈ ಶಾಸನಕ್ಕೆ ಬೆಂಬಲ ಬರಲಿ ಅಂತ ಸರ್ಕಾರದವರೇ ವಿತಕ್ಕೆ ಮಾಡಿಸಿರಬಾರದು ಅಂತ ಹೇಳುವ ಮಟ್ಟಿಗೆ ಭಾಷಣ ಮಾಡಲಿಕ್ಕೆ ಹೊಗಬೇಕಾದರೆ, ಒಂದು ರೀತಿಯಿಂದ ತಾವು ಪ್ರಿಸ್ಕ್ರೈಮ್ ಮಾಡಿಕೊಳ್ಳಲಿಕ್ಕೆ ತಮ್ಮ ಪಕ್ಷಕ್ಕೆ ಎಷ್ಟು ಅಧಿಕಾರ ಇದೆಯೋ ಅದೇ ರೀತಿ ನಮ್ಮ ಪಕ್ಷಕ್ಕೂ ಅಧಿಕಾರ ಇದೆ. ಆದರಿಂದ ಏನೂ ಸಾಧನೆ ಮಾಡಲಿಕ್ಕೆ ಆಗುವುದಿಲ್ಲ. ನಿಮಗೆ ಬೆಂಬಲ

ಇದೆ ಮಾಡಿಕೊಳ್ಳಬಹುದು ಅಂತ ಹೇಳಿದರು, ಮಾನ್ಯ ದೇವರಾಜ್ ಅರಸ್ ಅವರು ಇಲ್ಲಿ ಕುಳಿತು, ಮಾನ್ಯ ದೇವೇಗೌಡರು, ಬೊಮ್ಮಾಯಿಯವರು ಪ್ರಶ್ನೆ ಮಾಡಿದಾಗ ನನಗೆ ಈ ಕಡೆಯಲ್ಲಿರತಕ್ಕ ಎಲ್ಲರ ಬೆಂಬಲ ಇರುವವರೆಗೂ ನೀವು ಏನು ಮಾಡಲಿಕ್ಕೆ ಆಗುವುದಿಲ್ಲ ದೇವೇಗೌಡರೇ ಅಂತ ಹೇಳಿದ್ದಾರೆ. ನಿಮಗೆ ಮೆಜಾರಿಟಿ ಬಂದರೆ ನೀವು ಮಾಡಿ, ನಮಗೆ ಮೆಜಾರಿಟಿ ಇದೆ ನಾವು ಮಾಡಿದ್ದೇವೆ ಎಂದು ಹೇಳಿದ್ದಾರೆ, ಈಗ ನಾನು ಅದರ ಒಗ್ಗೆ ಹೋಗುವುದಿಲ್ಲ ದೇಶದ ಜನತೆಯ ಮೇಲೆ ತಾವು ಎಷ್ಟು ಕಳಕಳಿ ತೋರಿಸುತ್ತಿರೋ ನಮಗೂ ಅಷ್ಟೇ ಕಳಕಳಿ ಇದೇ ನಾನು ಕಾರ್ಮಿಕರ ಸಂಘದಲ್ಲಿ ಕೆಲಸ ಮಾಡುತ್ತಾ ಪ್ಲಾಂಟೇಷನ್ ಯೂನಿಯನ್‌ನಲ್ಲಿ ಕಾರ್ಯದರ್ಶಿಯಾಗಿದ್ದವನು. ಕಾರ್ಮಿಕರ ವಾದವಿವಾದದ ಸಭೆಗಳಲ್ಲಿ ಭಾಗವಹಿಸಿದ್ದೇನೆ. ಕಾರ್ಮಿಕರ ಸಂಘದಲ್ಲಿ ಕಾರ್ಯದರ್ಶಿಯಾಗಿ ಮೂರು ವರ್ಷ ಕೆಲಸ ಮಾಡಿದ್ದೇನೆ. ಕಾರ್ಮಿಕರ ಬಗ್ಗೆ ನಮಗೂ ಕೂಡ ಸಹಾನುಭೂತಿ ಇದೆ. ಎಲ್ಲಾ ಕಾರ್ಮಿಕರು ಇದನ್ನು ವಿರೋಧ ಮಾಡುತ್ತಾರೆಂದು ನಾನು ತಿಳಿದುಕೊಂಡಿಲ್ಲ. ಅಧ್ಯಕ್ಷರೆ, ಇವೊತ್ತು ಯಾವುದೇ ಕಾರ್ಖಾನೆ ತೆಗೆದುಕೊಳ್ಳಿ, ಉದಾಹರಣೆಗೆ ವೈಕೋ, ಹೆಚ್. ಎಂ. ಟಿ., ಬಿ.ಇ ಎಲ್., ನಲ್ಲಿ ಇರತಕ್ಕ ಕಾರ್ಮಿಕರಲಿ ನೂರಕ್ಕೆ ಎಂಭತ್ತು ಜನ ಕಾರ್ಮಿಕರು ದೇಶದ ಉತ್ಪತ್ತಿಯನ್ನು ಜಾಸ್ತಿ ಮಾಡಬೇಕು ಎನ್ನತಕ್ಕವರೇ ಇದ್ದಾರೆ. ಇನ್ನು ಕೇವಲ ಇಪ್ಪತ್ತು ಪರ್‌ಸೆಂಟ್ ಜನರು ಯೂನಿಯನ್ ಜೊತೆಯಲ್ಲಿ ಸೇರಿಕೊಂಡು ಎಂಭತ್ತು ಪರ್‌ಸೆಂಟ್ ಕೆಲಸ ಮಾಡುವಂತಹ ಜನರನ್ನು ತಡೆಯುವಂತಹ ಸಂಘಗಳು ಇವೆ. ಅನೇಕ ಸಾರಿ ಸರ್ಕಾರದ ಮುಂದೆ ಬಂದು ನಾವು ನಮ್ಮ ಜೀವನ ಸಾಗಿಸಬೇಕು ಅಂತ ಜನರು ಹೇಳಿದ್ದಾರೆ. ಈಗ ಏನಾಗಿದೆ ಅಂದರೆ ಒಬೊಬ್ಬರ ಹೆಸರಿನಲ್ಲಿ ಒಂದೊಂದು ಯೂನಿಯನ್ ಮಾಡಿಕೊಂಡು ಒಂದಕ್ಕೊಂದು ಬೆಂಬಲ ಕೊಟ್ಟು ಅನೇಕ ಕಾರ್ಖಾನೆಗಳಲ್ಲಿ ಕೆಲಸ ನಿಂತು ಹೋಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೆ ಆಗುತ್ತದೆ, ಹೀಗೆ ಆಗುತ್ತದೆ ಎಂದು ಹೇಳಿದರು. ಇವೊತ್ತು ಐಪಿಸಿ ನಲ್ಲಿ ಕೆಲವು ಅಧಿಕಾರ ಇದೆ, ಕ್ರಿಮಿನಲ್ ಪ್ರೊಸೀಜರ್ ನಲ್ಲಿ ಕೆಲವು ಅಧಿಕಾರ ಇದೆ. The Station Officer would arrest the people without any warrant. The Station Officer could arrest any person whether it is a bailable or non-bailable offence and produce him before the Magistrate. ನಾವೇನು ಹೊಸದಾಗಿ ಈ ಬಿಲ್ಲಿನಲ್ಲಿ ವಿಶೇಷ ಅಧಿಕಾರ ತೆಗೆದುಕೊಂಡು ಪೋಲೀಸಿನವರಿಗೆ ಮ್ಯಾನೇಜ್‌ಮೆಂಟಿನವರಿಗೆ ಅಧಿಕಾರ ಕೊಡಬೇಕು ಅಂಥ ಈ ಶಾಸನ ತಂದಿಲ್ಲ. ಈ ಶಾಸನವನ್ನು ತಂದು ನಾವೇನು ಹೊಸದಾಗಿ ಕಿರಿಟ ಇಟ್ಟುಕೊಳ್ಳಬೇಕು ಅಂತ ಇಲ್ಲ. ಬೇರೆ ಊರುಗಳಿಂದ ಬೆಂಗಳೂರು ನಗರಕ್ಕೆ ಹತ್ತು ಲಕ್ಷ ಜನ ಬರುತ್ತಾರೆ ಅದೇ ರೀತಿ ಬೆಂಗಳೂರಿನಿಂದ ಬೇರೆ ಊರುಗಳಿಗೆ ಬೇಕಾದಷ್ಟು ಜನ ಹೋಗುತ್ತಾರೆ. ಅವರು ಬಸ್ಸುಗಳಲ್ಲಿ ಬಂದಾಗ ಬಸ್‌ಸ್ಟ್ಯಾಂಡಿನಲ್ಲಿ ಇಳಿಯುತ್ತಾರೆ. ಅಂತಹ ಸಂದರ್ಭದಲ್ಲಿ ಯಾವುದೋ ಕ್ಷುಲ್ಲಕ ಕಾರಣದಿಂದ, ಯಾವುದೋ ಸಣ ಕಾರಣದಿಂದ ಇಡೀ ಆಟೋರಿಕ್ಷಾ ನಿಂತು ಹೋದರೆ ಏನು ಮಾಡಬೇಕು. ಬೇರೆ ಊರುಗಳಿಂದ ಬಂದವರ ಪರಿಸ್ಥಿತಿ ಏನಾಗಬೇಕು. ನಾನು ವಾದ ವಿವಾದದ ಬಗ್ಗೆ ಹೋಗುವುದಿಲ್ಲ. ಆಟೋರಿಕ್ಷಾ ಡ್ರೈವರದು ನ್ಯಾಯ ಇರಬಹುದು, ಪೋಲೀಸಿನವರದು ತಪ್ಪು ಇರಬಹುದು. ವಾದ ವಿವಾದ ತೀರ್ಮಾನ ಮಾಡಲಿಕ್ಕೆ ಡ್ರೈಪಾರ್ಟಿ ಮೀಟಿಂಗ್ ಮಾಡಿ ಅದಕ್ಕೆ ವಿರೋಧ ಇಲ್ಲ. ಈ ಬಿಲ್ಲಿನ ಉದ್ದೇಶ ಏನು ಅಂದರೆ, ಆಕ್ಸ್‌ಮಾತ್ ಎಲ್ಲಾ ಆಟೋರಿಕ್ಷಾ ನಿಲ್ಲಿಸಿದರೆ, ಏಲೆಕ್ಟ್ರಿಸಿಟಿ ನಿಲ್ಲಿಸಿದರೆ, ತೊಂದರೆಯಾಗಬಾರದು ಅಂತ. ಮೊನ್ನೆ ಬೆಂಗಳೂರು ಹಾಲಿನ ಡೈರಿಯಲ್ಲಿ ಸ್ಟ್ರೈಕ್ ಆಗಿದ್ದರಿಂದ ಎಷ್ಟು ಜನರಿಗೆ ತೊಂದರೆಯಾಯಿತು. ಇದನ್ನೆಲ್ಲಾ ನೋಡಬೇಕಾಗುತ್ತದೆ ಮಾನ್ಯ ಬಸವಲಿಂಗಪ್ಪನವರು ಒಂದು ಸಾರಿ ಹಾಲು ಕುಡಿದು ಬಾಕಿಯವರಿಗೆ ಏತಕ್ಕೆ ಕೊಡಬೇಕು ಅಂತ ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.--ಅಧ್ಯಕ್ಷರೆ. ನಾನು ಯಾವಾಗ ಆರೀತಿ ಹೇಳಿದೆ.

ಶ್ರೀ ಆರ್ ಗುಂಡೂರಾವ್.—ಮಾನ್ಯ ಬಸವಲಿಂಗಪ್ಪನವರ ಮೇಲಿನ ಪ್ರೀತಿಯಿಂದ ಆ ರೀತಿ ಹೇಳಿದೆ. ಹಾಲು ಎಷ್ಟು ಜನರಿಗೆ ಆವಶ್ಯಕತೆ ಇತ್ತು, ಎಷ್ಟು ಜನರು ಮದುವೆ ಮಾಡುತ್ತಿದ್ದರು, ಎಷ್ಟು ಜನ ಆಸ್ಪತ್ರೆಗಳಲ್ಲಿ ರೋಗಿಗಳು ಇದ್ದರು. ಸುಮಾರು ೪೫-೬ ಸಾವಿರ ಲೀಟರ್ ಹಾಲು ರಸ್ತೆಯಲ್ಲಿ ಚೆಲ್ಲಿಹೋಯಿತು. ಕಾಲು ಲೀಟರ್, ಅರ್ಧ ಲೀಟರ್ ಒಂದು ಲೀಟರ್ ಹಾಲಿಗೆ ಕಷ್ಟ ಪರಿಸ್ಥಿತಿ ಇರುವಾಗ ಸಾವಿರಾರು ಲೀಟರ್ ಹಾಲು ಚೆಲ್ಲಿ ಹೋಯಿತು ಅಂದರೆ ಪರಿಸ್ಥಿತಿ ಏನು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಈ ಲಾ ಇಲ್ಲದೇ ಸಮಸ್ಯೆ ಬಗೆ ಹರಿದುಹೋಯಿತು.

೬-೩೦ ಪಿ.ಎಂ.

ಶ್ರೀ ಆರ್ ಗುಂಡೂರಾವ್.—ತಾವು ಹೇಳಿದ್ದಕ್ಕೆ ಸರ್ಕಾರದ ವತಿಯಿಂದ ನಾನು ತಮಗೆಲ್ಲರಿಗೂ ವಿವರಣೆಯನ್ನು ಕೊಡುತ್ತಿದ್ದೇನೆ. ಆದ್ದರಿಂದ ಸರ್ಕಾರ ಇದನ್ನು ಹೆಚ್ಚುಗಾರಿಕೆಗೋಸ್ಕರವಾಗಿಯೊ, ಅಥವಾ ಪ್ರತಿಷ್ಟೆಗಾಗಿಯೋ ತಂದಿದಲ್ಲ.ಈ ಬಿಲ್ಲನ್ನು ಶ್ರೀಪ್ರಾನ್ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ನಾನು ಸಾರಿಗೆ ಮಂತ್ರಿಯಾಗಿದ್ದೆ ಆಗಲೇ ಇದನ್ನು ತರಬೇಕೆಂದು ಅವರಲ್ಲಿ ಪ್ರಸ್ತಾಪ ಮಾಡಿದ್ದು ನಿಜ. ನಾನು ಸಾರಿಗೆ ಮಂತ್ರಿಯಾಗಿದ್ದಾಗ ಬಸ್ಸುಗಳ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಎಲ್ಲ ಶಾಸಕರನ್ನು ಕರೆದು ಅವರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿದ್ದೇನೆ. ಎಲ್ಲ ಶಾಸಕರು ಹೇಳಿದ ವಿಚಾರಗಳನ್ನೂ ರೆಕಾರ್ಡ್ ಮಾಡಿಸಿದ್ದೇನೆ. ಆ ಸಭೆಯಲ್ಲಿ ಎಲ್ಲ ಶಾಸಕರು ಒಂದೂ ಬಸ್ಸೂ ಸರಿಯಾಗಿಲ್ಲ.ಎ ಎಲ್ಲವೂ ಹಳೆಯದಾಗಿವೆ, ಅವುಗಳನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ ಆದರೆ ಇದು ಮುಖ್ಯವಾದ ಹಿನ್ನೆಲೆಯಲ್ಲ. ಇದರ ಹಿನ್ನೆಲೆಯಲ್ಲಿ ಮತ್ತೊಂದು ತೊಂದರೆ ಏನೆಂದರೆ. ಎಲ್ಲ ಕಡೆ ಕಾರ್ಮಿಕರ ಸತ್ಯಾಗ್ರಹದಿಂದ ಈ ತೊಂದರೆ ಬರುತ್ತದೆ. ಹಳೇ ಬಸ್ಸುಗಳೂ ಓಡುತ್ತವೆ. ಆದನ್ನು ಹೇಳಬೇಕೆಂದು ಕಾರ್ಮಿಕರ ಸಮಸ್ಯೆ ಬರುತ್ತದೆ. ಇವತ್ತಿನ ದಿವಸ ನಮ್ಮ ಇಡೀ ರಾಷ್ಟ್ರದಲ್ಲಿ ಮೋಟಾರ್ ವಾಹನಗಳಿಗೆ ಬೇಕಾದಂತಹ ಉಪಕರಣಗಳನ್ನು ತಯಾರು ಮಾಡತಕ್ಕಂತಹ ಒಂದೇ ಒಂದು ಕಂಪನಿ ಅಂದರೆಮೈಕೋ. ಆ ಕಂಪನಿಯಲ್ಲಿರತಕ್ಕಂತಹ ನೌಕರರು ಸತ್ಯಾಗ್ರಹ ಮಾಡಿದ್ದೇ ಆದರೆ ಬೇರೆ ಎಲ್ಲೂ ನಮಗೆ ಮೋಟಾರ್ ವಾಹನಕ್ಕೆ ಬೇಕಾದ ಉಪಕರಣಗಳು ದೊರಕುವುದೇ ಇಲ್ಲ. ಅದೇ ರೀತಿ ಟಾಟಾ ಕಂಪನಿಯವರು ಟಾಟಾ ಮರ್ಸಿಡಿಸ್ ಎಂಬ ಬೆಂಜ್ ಚಾಸಿಯನ್ನು ಕೊಡುತ್ತಾರೆ. ಇವತ್ತು ಅಲ್ಲಿ ಕೆಲಸ ಮಾಡತಕ್ಕಂತಹ ಕಾರ್ಮಿಕರು ಏನಾದರೂ ಸತ್ಯಾಗ್ರಹ ಮಾಡಿದರೆ ನಮಗೆ ಚಾಸಿ ಬರುವುದಿಲ್ಲ. ಅದೇ ರೀತಿ ಇನ್ನೊಂದು ಅಶೋಕ್ ಲೇಲ್ಯಾಂಡ್‌ಕಂಪನಿ ಇದೆ.ಅಲ್ಲಿರತಕ್ಕಂತಹ ಕಾರ್ಮಿಕರು ಏನಾದರೂಸತ್ಯಾಗ್ರಹ ಬಂದರೆ ನಮಗೆ ಅಶೋಕ್ ಲೇಲ್ಯಾಂಡ್ ಚಾಸಿ ಬರುವುದಿಲ್ಲ. ಹೆಚ್ಚಿಗೆ ಪ್ರೊಡಕ್ಷನ್ ಆಗದೆ ನಮಗೆ ಟಾಟಾ ಮರ್ಸಿಡಿಸ್ ಬೆಂಜ್ ಚಾಸಿ ಮತ್ತು ಅಶೋಕ್ ಲೇಲ್ಯಾಂಡ್ ಚಾಸಿ ಬರಬೇಕು ಅಂದರೆ ಎಲ್ಲಿಂದ ಚಾಸಿಗಳು ಬರುತ್ತವೆ? ಚಾಸಿಗಳು ಬರದೇ ಬಸ್‌ಗಳ ಸಂಖ್ಯೆಯನ್ನು ಯಾವ ರೀತಿ ಹೆಚ್ಚು ಮಾಡುವುದಕ್ಕೆ ಸಾಧ್ಯ? ಏತಕ್ಕೋಸ್ಕರ ಪ್ರೊಡಕ್ಷನ್ ಹೆಚ್ಚು ಆಗುತ್ತಿಲ್ಲ? ಪ್ರೊಡಕ್ಷನ್ ಹೆಚ್ಚು ಆಗದೇ ಇರುವುದಕ್ಕೆ ಮೂಲ ಕಾರಣ ಏನೆಂದರೆ, ಆಲ್ಲಿರತಕ್ಕಂತಹ ಕಾರ್ಮಿಕರು ಕೆಲವರು ಗುಂಪುಗಳನ್ನು ಮಾಡಿಕೊಂಡು ಇವರನ್ನು ಕಂಡರೆ ಅವರಿಗೆ ಆಗುವುದಿಲ್ಲ, ಅವರನ್ನು ಕಂಡರೆ ಇವರಿಗೆ ಆಗುವುದಿಲ್ಲ. ಈ ರೀತಿ ಮಾಡಿಕೊಂಡು ಅದರಲ್ಲೂ ಕೆಲವು ಜನಗಳ ಕೈವಾಡದಿಂದ ಲೇಬರ್ ಯೂನಿಯನ್ ಎಂಬುದಾಗಿ ಮಾಡಿಕೊಂಡು ಅವರವರಲ್ಲೇ ಒಳಜಗಳಗಳಿಂದ ಮುಷ್ಕರ ಮಾಡುವುದು. ನಾವು ಒಂದು ಕಡೆ ಉತ್ಪಾದನೆಯನ್ನು ಜಾಸ್ತಿ ಮಾಡಬೇಕೆಂದು ಘೋಷಣೆ ಮಾಡುತ್ತೇವೆ. ಮತ್ತೊಂದು ಕಡೆ ದೇಶದಲ್ಲಿ ಎಲ್ಲರಿಗೂ ಉದ್ಯೋಗ ಸಿಗಬೇಕೆಂದು ಘೋಷಣೆ ಮಾಡುತ್ತೇವೆ. ಆದರೆ ಮತ್ತೊಂದು ಕಡೆ ಏನಾಗುತ್ತಿದೆ ಎಂದರೆ, ದೇಶದಲ್ಲಿ ಅಶಾಂತಿ ಬೆಳೆಯಬೇಕು. ಎಲ್ಲ ಉತ್ಪಾದನೆ ವಿರುಪೇರು ಆಗಬೇಕು, ಆರ್ಥಿಕ ರಂಗದಲ್ಲಿ ದೊಡ್ಡ ಗೊಂದಲವಾಗಿ, ಆರ್ಥಿಕ ರಂಗಕ್ಕೇ ಧಕ್ಕೆ ಬರುವಂತಹ ವಾತಾವರಣ ಮತ್ತೊಂದು ಕಡೆ ನಿರ್ಮಾಣವಾಗುತ್ತಿದೆ. ಎಲ್ಲೇ ಹೋದರೂ ಡೆಮಾಕ್ರಸಿ. ನಮ್ಮ ಕಡೆ ಅನೇಕ ಜನ ಹೇಳಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರೂ ಹೇಳಿದ್ದಾರೆ. ಆರ್ಥಿಕ ರಂಗದಲ್ಲಿ ಸುಧಾರಣೆಯಾಗದಿದ್ದರೆ ಪ್ರಜಾಪ್ರಭುತ್ವ ಇಲ್ಲ ಡೆಮಾಕ್ರಸಿ ಮುಂದುವರಿಯಲಾರದು ಎಂಬುದಾಗಿ ಹೇಳಿದ್ದಾರೆ. ಇದನ್ನು ಯಾರೂ ಬೇಕಾದರೂ ಹೇಳಬಹುದು. ಆದರೆ ಈ ಎಲ್ಲ ಪರಿಸ್ಥಿತಿಗಳು ಬದಲಾವಣೆಯಾಗುವುದು ಹೇಗೆ ? ಆರ್ಥಿಕ ಪರಿಸ್ಥಿತಿ ಬದಲಾವಣೆಯಾಗಬೇಕಾದರೆ, ದೇಶದ ಸಂಪತ್ತು ಹೆಚ್ಚಾಗಬೇಕಾದರೆ, ಎಲ್ಲಾ ಕಾರ್ಖಾನೆಗಳು,ಯಾವುದೇ ರೀತಿಯಾದ ಮುಷ್ಕರ ಇಲ್ಲದೆ ಕೆಲಸ ಮಾಡಬೇಕು. ಲೇಬರ್ ಅನ್‌ರೆಸ್ಟ್ ಎಂಬುದು ಇರಬಾರದು. ಈ ರೀತಿ ಯಾವುದೇ ವಿಧವಾದ ಮುಷ್ಕರ ಗೊಂದಲ ಇಲ್ಲದೆ ದೇಶದ ಉತ್ಪನ್ನವನ್ನು ಹೆಚ್ಚು ಮಾಡಿದರೆ ಆರ್ಥಿಕ ಪರಿಸ್ಥಿತಿ ತಾನೇ ತಾನಾಗಿ ಬದಲಾವಣೆಯಾಗುತ್ತದೆ. ೩೦ ವರ್ಷಗಳು ಕಾಂಗ್ರೆಸ್ ಏನು ಅಧಿಕಾರದಲ್ಲಿತ್ತು. ನಂತರ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಆದರಲ್ಲಿ ಯಾರ್ಯಾರು ಆರ್ಥಿಕ ಪರಿಸ್ಥಿತಿ ಬದಲಾವಣೆ ಮಾಡುತ್ತೇವೆ ಎಂಬುದಾಗಿ ಹೇಳುತ್ತಿದ್ದರೋ, ಯಾರ್ಯಾರು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದರೋ ಅವರೆಲ್ಲರೂ ಅಧಿಕಾರದಲ್ಲಿ ಶಾಮೀಲಾಗಿದ್ದರು. ಅವರ ಕೈಯಲ್ಲೂ ಆಗಲಿಲ್ಲ. ಅವರಿಂದ ಅಧಿಕಾರ ಹೋಯಿತು. ಆದ್ದರಿಂದ ಇದರ ಒಗ್ಗೆ ವಾದ ಮಾಡುವುದು ಬಹಳ ಸುಲಭ ಆದರೆ ಕಾರ್ಯತಃ ಮಾಡುವುದು ಬಹಳ ಕಷ್ಟ. ಆದ್ದರಿಂದ ದೇಶದ ಆರ್ಥಿಕ ಪರಿಸ್ಥಿತಿ ಬದಲಾವಣೆಯಾಗಬೇಕಾದರೆ, ದೇಶದ ಉತ್ಪನ್ನ ಬೆಳೆಯಬೇಕು ದೇಶದಲ್ಲಿ

ಶಾಂತಿ ಇರಬೇಕು, ದೇಶದಲ್ಲಿ ಶಿಸ್ತು ಇರಬೇಕು. ಇವೆಲ್ಲವೂ ಈ ದೇಶದಲ್ಲಿ ಬಳಿಯಬೇಕಾದರೆ, ಈ ಶಾಸನವನ್ನು ಜಾರಿಗೆ ತರಬೇಕೆಂಬ ಒಂದೇ ಉದ್ದೇಶದಿಂದ ಈ ದಿನ ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿರುವುದೇ ಹೊರತಾಗಿ, ಸರ್ಕಾರದ ಬಳಿದು ಪ್ರತಿಷ್ಠೆಗಾಗಿ ತಂದಿದ್ದಲ್ಲ. ಇದನ್ನು ತಾವು ಗಳೆಲ್ಲರೂ ಕರಾಳ ಶಾಸನ ಎಂಬುದಾಗಿ ಕರೆಯುವುದಾದರೆ, ಇನ್ನು ಯಾವ ಶಾಸನವನ್ನು ತರುವುದಕ್ಕೆ ಸಾಧ್ಯ ? ಮಸೂದೆಯ ವಿವರಗಳ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ರಷ್ಯಾ ಕ್ರಾಂತಿ, ಇಟಲಿ ಕ್ರಾಂತಿ ಮತ್ತು ಫ್ರಾನ್ಸ್ ಕ್ರಾಂತಿಯನ್ನು ಓದಿದ್ದೇನೆ. ಕೇರಳದಲ್ಲಿ, ಪಶ್ಚಿಮ ಬಂಗಾಳದಲ್ಲಿ ಸರ್ಕಾರ ನಡೆಸುವಂತಹ ಸಂಬಂಧದಲ್ಲಿ ಬೇರೆ ರಾಜ್ಯದ, ರಾಷ್ಟ್ರದ ಸಮಸ್ಯೆ ಬಂದಾಗ ಸಮಸ್ಯೆಯನ್ನು ಹೇಗೆ ಬಗೆ ಹರಿಸಬೇಕು ? ಯಾವ ರೀತಿ ಬಗೆ ಹರಿಸಬೇಕು ? ಎಂಬುದರ ಬಗ್ಗೆ ಕುಳಿತುಕೊಂಡು ಮೀಟಿಂಗ್ ಮಾಡಿದರೆ ಸಾಧ್ಯವಾಗುವುದಿಲ್ಲ. ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಇಂತಹ ಶಾಸನಗಳ ಮೂಲಕ ಮಾತ್ರ ತರುವುದಕ್ಕೆ ಸಾಧ್ಯ ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆ. ಆದರೂ ಇದರ ಬಗ್ಗೆ ಎಲ್ಲವನ್ನೂ ತಿಳಿದಿದ್ದೇನೆ ಎಂಬುದಾಗಿಯೂ ನಾನು ಹೇಳುವುದಿಲ್ಲ. ಆದರೆ ಪರಿಸ್ಥಿತಿಯನ್ನು ಹತೋಟಿಯಲ್ಲಿಡಬೇಕೆಂದು ಎಲ್ಲರೂ ಹೇಳಿದ್ದಾರೆ. ಆದ್ದರಿಂದ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಇಂತಹ ಕಟುತರವಾದ ಶಾಸನವನ್ನು ತರಲೇಬೇಕು. ಎಲ್ಲರ ಕೋರಿಕೆಯ ಈ ಮಸೂದೆಯನ್ನು ತಂದಿದ್ದೇನೆ. ಇಂತಹ ಶಾಸನಗಳನ್ನು ತರಬೇಕೇಕು. ಇದರಲ್ಲಿ ಕೆಲವು ಲೋಪದೋಷಗಳಿದ್ದರೆ ಅವುಗಳನ್ನು ಸರಿಪಡಿಸಿಕೊಂಡು. ಆದ್ದರಿಂದ ಹತೋಟಿ ಇರಬೇಕೆಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಇಲ್ಲದಿದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಇದನ್ನು ನಮ್ಮ ಶ್ರೀಮಾನ್ ಜೆ.ಎಚ್. ಪಟೇಲರವರೂ ಹೇಳಿದ್ದಾರೆ. ಇದನ್ನು ಬೇರೆಯವರೂ ಬೇಕಾದರೂ ಹೇಳಬಹುದು. ಎಲ್ಲರಿಗಿಂತ ನಾನೇ ಹೆಚ್ಚಿಗೆ ತಿಳಿದುಕೊಂಡಿದ್ದೇನೆ ಎಂಬುದಾಗಿ ನಾನಂತೂ ತಿಳಿದುಕೊಂಡಿಲ್ಲ. Everyday, one should learn somany things. Every person is a student every day. In day-to-day life one should learn from his wife, children and others.

ಶ್ರೀ ಕೆ. ಎಚ್. ಶ್ರೀನಿವಾಸ್.—ಇವನಿಗೆ ಹೆಂಡತಿಯಿಂದ ತಿಳಿದುಕೊಳ್ಳಬೇಕೆಂದು ಹೇಳಿದ್ದಕ್ಕೆ ಶ್ರೀ ಮಾನ್ ಎ. ಲಕ್ಷ್ಮಿಸಾಗರ್‌ರವರು ಪ್ರೊಟೆಸ್ಟ್ ಮಾಡಿ ಹೊರಟರು.

SRI R. GUNDU RAO.—How do you know that he has no wife ?

ಶ್ರೀ ಕೆ.ಎಚ್. ಶ್ರೀನಿವಾಸ್.—ಒಂದು ಸಾರಿ ಈ ಮನೆಯಲ್ಲಿ ಚರ್ಚೆ ಮಾಡಿದ್ದು ನನಗೆ ಗೊತ್ತಿತ್ತು. ಅದಕ್ಕಾಗಿ ಹೇಳಿದೆ ಅಷ್ಟೆ.

SRI A. LAXMI SAGAR.—I protest ; it is a defamatory statement.

SRI R. GUNDU RAO.—I don't know that he has no wife. Sri Srinivas says that he has no wife. That is why I asked Sri Srinivas how does he know it.

ಕೋಲಾರದಲ್ಲಿ ಆದ ಒಂದು ಕೊಲೆ ಬಗ್ಗೆ ಹೇಳುತ್ತೇನೆ. ಅಲ್ಲಿ ಕೊಲೆ ಆಗಿದೆ. ಆದರೆ ಅಲ್ಲಿ ಕೋರ್ಟಿನಲ್ಲಿ ಬೇಲ್ ಕೊಟ್ಟಿದ್ದಾರೆ. ಈ ರೀತಿಯಿಲ್ಲಾ ಆಗುತ್ತಿರುವುದರಿಂದ ನಾವು ಈ ಕಾನೂನನ್ನು ತರಬೇಕೆಂದು ಇರುವುದು. ಇನ್ನೆಷ್ಟು ಬೇರೆ ಬೇರೆ ನಗರಗಳಲ್ಲಿ ಆಟೋ ರಿಕ್ಷಾ ಡ್ರೈವರ್‌ಗಳು ಸ್ಟ್ರೈಕ್ ಮಾಡುತ್ತಾರೆ. ಇದುವರೆಗೂ ಎಷ್ಟು ಜನಕ್ಕೆ ತೊಂದರೆಯಾಗುವುದಿಲ್ಲ. ಕೆಲವರು ಮದುವೆಗಳಿಗೆ ಹೋಗಬೇಕಾಗಿರುತ್ತದೆ, ಕೆಲವರು ಸಂಬಂಧಿಕರ ಸಾವು ಸಂಭವಿಸಿದ್ದು ಅಲ್ಲಿಗೆ ತುರ್ತು ಹೋಗಬೇಕಾಗಿರುತ್ತದೆ, ಕೆಲವರು ಪರೀಕ್ಷೆಗಳಿಗೆ ಹೋಗಬೇಕಾಗಿರುತ್ತದೆ, ಕೆಲವರು ತಂದೆ ತಾಯಿಗಳು ಸೀರಿಯಸ್ ಆಗಿದ್ದು ಆವರನ್ನು ಅರ್ಜೆಂಟಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗ ಬೇಕಾಗಿರುತ್ತದೆ. ಬಿ.ಎಲ್.ಡಿ.ಗಳು ಬಿ.ಎಲ್.ಸಿ. ಎಲೆಕ್ಷನ್‌ಗೆ ಓಟನ್ನು ಮಾಡುವುದ ಕ್ಕೋಸ್ಕರ ಏರ್‌ಪೋರ್ಟ್‌ಗೆ ಬರಬೇಕಾಗಿರುತ್ತದೆ ಏನೇ ಆಗಲಿ ಇವರು ಸ್ಟ್ರೈಕ್ ಮಾಡಿದರೆ ಬಹಳ ತೊಂದರೆಯಾಗುತ್ತದೆ. ಇದು ಶ್ರೀ ದೇವರಾಜ ಅರಸ್ ಅವರ ಸಮಸ್ಯೆ ಅಲ್ಲ, ಶ್ರೀ ಬಸವಲಿಂಗಪ್ಪನವರ ಸಮಸ್ಯೆಯಲ್ಲ, ಶ್ರೀ ದೇವೇಗೌಡರ ಸಮಸ್ಯೆ ಅಲ್ಲ, ಗುಂಡೂರಾವ್ ಅವರ ಸಮಸ್ಯೆ ಅಲ್ಲ; ಇದು ಒಂದು ರಾಷ್ಟ್ರದ ಸಮಸ್ಯೆ. ಎಲ್ಲರೂ ಸಂಘಟಿತರಾಗಿ ಈ ಕಾನೂನನ್ನು ತಂದಿದ್ದು. ಇದರಲ್ಲಿ ಕೆಲವು ಲೋಪದೋಷಗಳು ಇರಬಹುದು, ಇಲ್ಲಾ ಎಂದು ಹೇಳಿಲ್ಲ. ಅದನ್ನು

ಸರಿಮಾಡೋಣ. ಇದರ ಬಗ್ಗೆ ಮಾನ್ಯ ಸದಸ್ಯರು ಚರ್ಚೆಮಾಡಬೇಕಾಗುತ್ತದೆ. ಈ ಕಾನೂನನ್ನು ಜಾರಿಗೆ ಕೊಟ್ಟರೆ ಹೈಕೋರ್ಟಿನಲ್ಲಿ ಸ್ಟ್ರೈಕ್‌ಡೌನ್ ಆಗುತ್ತದೆಂದು ಮಾನ್ಯ ಸದಸ್ಯರು ಒಬ್ಬರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಎಷ್ಟೋ ಶಾಸನಗಳನ್ನು ನಾವು ಮಾಡಿದ್ದೇವೆ. ಎಲ್ಲಾ ಶಾಸನಗಳೂ ಹೈಕೋರ್ಟಿನಲ್ಲಿ ಸ್ಟ್ರೈಕ್‌ಡೌನ್ ಆಗಿವೆಯೇ ? ಯಾವ ಒಂದು ದುರುದ್ದೇಶ ನಮ್ಮಲ್ಲಿ ಇಲ್ಲ. ನಾವು ಸರ್ಕಾರವನ್ನು ನಡೆಸಿದರೂ ಅಷ್ಟೇ, ನೀವು ಸರ್ಕಾರವನ್ನು ನಡೆಸಿದರೂ ಅಷ್ಟೇ ಸರ್ಕಾರವನ್ನು ನಡೆಸು ವವರೇ ಸರ್ಕಾರವನ್ನು ನಡೆಸಬೇಕು ಸರ್ಕಾರವನ್ನು ನಡೆಸುವ ಧಾಟಿಯಲ್ಲಿ ಸರ್ಕಾರವನ್ನು ನಡೆಸ ಬೇಕು. ಆಡಳಿತ ಪಕ್ಷದವರು ಯಾವ ಧಾಟಿಯಲ್ಲಿ ಉತ್ತರವನ್ನು ಕೊಡಬೇಕೋ ಆ ಧಾಟಿಯಲ್ಲೇ ಉತ್ತರವನ್ನು ಕೊಡಬೇಕಾಗುತ್ತದೆ. ವಿರೋಧ ಪಕ್ಷದಲ್ಲಿ ಇರುವವರು ಯಾವ ಧಾಟಿಯಲ್ಲಿ ಮಾತನಾಡ ಬೇಕೋ ಆ ಧಾಟಿಯಲ್ಲೇ ಅವರ ಮಾತನಾಡಬೇಕಾಗುತ್ತದೆ. ಈ ಮಾತನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಇಂತಹ ಒಂದು ಬಿಲ್‌ಮೇಲೆ ಬೇರೆ ಯಾವಾಗಲೂ ಇಷ್ಟೊಂದು ಧೀರ್ಘ ಚರ್ಚೆಯಾಗಿರಲಿಲ್ಲ. ಸುಮಾರು ೮ ಗಂಟೆಗಳ ಕಾಲ ಇದರ ಮೇಲೆ ಚರ್ಚೆ ಆಗಿದೆ. ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇಲ್ಲಿ ಬುದ್ಧಿವಂತರಿದ್ದಾರೆ ಅವರೂ ಕೂಡ ತಮ್ಮ ಅಭಿಪ್ರಾಯಗಳನ್ನು ಕೊಡಲಿ, ನಾವು ನಮಗೆ ತಿಳಿದ ಮಟ್ಟದ ಬುದ್ಧಿಯಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ ಹೆಚ್ಚಿನ ಬುದ್ಧಿ ಇರುವವರು ಸ್ವಲ್ಪ ಕೊಡಿ. ಈಗ ಒಬ್ಬ ಕುರಿ ಕಾಯುವವನು ಒಂದು ೫೦೦ ಕುರಿಗಳನ್ನು ಮೇಯಿಸಿಕೊಂಡು ಕಾಯುತ್ತಿರುತ್ತಾನೆ. ಈಗ ಒಬ್ಬ ಐ.ಎಸ್. ಆಗಿರುವ ಅಥವಾ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿರುವ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಈ ಮಂದಿಯಲ್ಲಿರುವ ಕುರಿಗಳಲ್ಲಿ ಇಂಥವರಿಗೆ ಸಂಬಂಧಪಟ್ಟ ಕುರಿಯನ್ನು ಎಳೆದುಕೊಂಡು ಬಾ ಎಂದು ಹೇಳಿದರೆ ಅವನು ಆ ಕುರಿಯನ್ನು ಹುಡುಕಿ ತೆಗೆದುಕೊಂಡು ಬರುವುದಕ್ಕೆ ಸಾಧ್ಯವಿಲ್ಲ. ಅದೇ ಆ ಕೆಲಸವನ್ನು ಆ ಕುರಿಯನ್ನು ಕಾಯುತ್ತಿರುವ ಹುಡುಗ ಸರಾಗವಾಗಿ ಮಾಡಿ ತೋರಿಸುತ್ತಾನೆ. ಅದೇ ಆ ಕುರಿ ಕಾಯುತ್ತಿರುವವನು ವಿದ್ಯಾವಂತರು ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೂ ಸಹಾ ಸಾಧ್ಯವಿಲ್ಲ. ಆದ್ದರಿಂದ ನಾನು ತಮ್ಮ ಮುಂದೆ ಹೇಳುವುದು ಏನೆಂದರೆ ಇಲ್ಲಿ ಪದವೀಧರರು ಇದ್ದೀರಿ; ವಕೀಲರುಗಳು ಇದ್ದೀರಿ ಒಳ್ಳೆಯ ಸೂಕ್ತ ಸಲಹೆಗಳನ್ನು ಕೊಡಿ. ಇಗ ನಮ್ಮ ಮುಂದೆ ಇರುವುದು, ಈಗ ಈ ಸ್ಟ್ರೈಕ್‌ಗಳ ದೆಸೆಯಿಂದ ಸಾರ್ವಜನಿಕರಿಗೆ, ಹಾಗೂ ಸರ್ಕಾರಕ್ಕೆ ತೊಂದರೆಯಾಗುತ್ತಿರುವುದನ್ನು ನಿಲ್ಲಿಸಬೇಕೆನ್ನುವುದು, ಈ ದಿನ ಡ್ರೈವರ್ಸ್‌ಗೂ ಪ್ಯಾಸೆಂಜರ್ಸ್‌ಗೂ ಜಗಳವಾದರೆ, ಸಾರ್ವಜನಿಕವಾಗಿ ಕೇಸ್ ಹಾಕಬಹುದೇ ಹೊರತು ನಾವು ಅವನಿಗೆ ಬಸ್ ತೆಗೆದು ಕೊಂಡು ಹೋಗು ಎನ್ನುವ ಅಧಿಕಾರವಿಲ್ಲ. ಇಂತಹದ್ದನ್ನು ತಪ್ಪಿಸುವುದಕ್ಕೋಸ್ಕರವಾಗಿಯೇ, ಹಾಲಿನ ಸರಬರಾಜನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕೆನ್ನುವುದಕ್ಕೋಸ್ಕರವಾಗಿಯೇ, ಎಲೆಕ್ಟ್ರಿಸಿಟಿ ಸ್ಟ್ರೈಕ್‌ನಿಂದ ನಿತ್ಯ ಸಾವಿರಾರು ಮಿಲ್ ಗಳಲ್ಲಿ ಉತ್ಪನ್ನ ನಿಂತು ದೇಶಕ್ಕೆ ನಷ್ಟ ಉಂಟಾಗುವುದನ್ನು ತಪ್ಪಿಸುವುದಕ್ಕೋಸ್ಕರವಾಗಿಯೇ ನಾವು ಈ ಕಾನೂನನ್ನು ಜಾರಿಗೆ ತರುತ್ತಿರುವುದು. ನಾನೇನೂ ಇಲ್ಲಿ ಕಾರ್ಮಿಕರ ವಿರುದ್ಧವಾಗಿ ಹೇಳುತ್ತಿಲ್ಲ. ಇವತ್ತು ಯಾವುದಾದರೂ ಡಿಸ್ಪ್ಯೂಟ್ಸ್ ಇದ್ದರೆ ಅದನ್ನು ಕಾರ್ಮಿಕರ ಪರವಾಗಿಯೇ ಆದಷ್ಟು ಕೊಡು ವುದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳುವವನು ನಾನು. ನಾನೇನು ಮಾಲೀಕರ ಪರ ವಹಿಸಿಕೊಂಡವ ನಲ್ಲ. ಇಲ್ಲಿ ಮಾಲೀಕನಾಗಲಿ, ಕೂಲಿಗಾರನಾಗಲಿ ಯಾರು ತಪ್ಪಿತಸ್ಥ ಅವನು ಶಿಕ್ಷೆ ಅನುಭವಿಸಬೇಕು. ಇವತ್ತು ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸ ಆಗಬೇಕಾಗಿದೆ. ಕಾರ್ಮಿಕರಿಗೆ ಬೇಕಾದಂತಹ ಸವಲತ್ತು ಗಳನ್ನು ಕೊಡಬೇಕೆಂದು ಹೇಳುವವನು ನಾನು. ಕಾರ್ಮಿಕರ ಸೊಂಟದ ಮೇಲೆ ಹೊಡೆಯುವಂತಹ ಪ್ರಯತ್ನವನ್ನು ಮಾಡಬಾರದು. ನಮ್ಮ ಕಾರ್ಮಿಕರು ಒಳ್ಳೆಯವರಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕಾಫೀ ತೋಟದಲ್ಲಿ ಅನೇಕ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವತ್ತು ನಮ್ಮ ಜಿಲ್ಲೆಯಲ್ಲಿ ನೂರಕ್ಕೆ ಎಪ್ಪತ್ತು ಭಾಗದಷ್ಟು ಕಾಫಿಯನ್ನು ಬೆಳೆಯುತ್ತಿದ್ದಾರೆ ನಮ್ಮ ದೇಶದಲ್ಲಿ ಇವತ್ತು ೧ ಲಕ್ಷದ ೩೫ ಸಾವಿರ ಟನ್ ಕಾಫೀ ಬೇರೆ ದೇಶಗಳಿಗೆ ರಫ್ತು ಆಗುತ್ತಿದೆ. ಲಕ್ಷಾಂತರ ಜನರು ಇಂದು ಕಾಫೀ ತೋಟಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಅವರಿಗೆ ಮಳೆ ಬಂದಾಗಲೂ ಕೆಲಸ ಇರುತ್ತದೆ. ಮುತ್ತಿತರ ಸಮಯದಲ್ಲೂ ಅವರಿಗೆ ಕೆಲಸ ಇರುತ್ತದೆ. ಪಿಕ್ಕಿಂಗ್ ಸಮಯದಲ್ಲಿಯೂ ಅವರಿಗೆ ಕೆಲಸ ವಿರುತ್ತದೆ. ಪಿಕ್ಕಿಂಗ್ ಸೀಸನ್‌ನಲ್ಲಿ ಯಾರದೋ ಪ್ರಚೋದನೆಯಿಂದ ಈ ಕಾರ್ಮಿಕರು ಸತ್ಯಾಗ್ರಹವನ್ನು ಮಾಡಿ ದರೆ, ಕೆಲಸ ನಿಲ್ಲುತ್ತದೆ. ಅನಂತರ ೧೫ ದಿನಗಳೊಳಗೆ ಮಳೆ ಬಂದರೆ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಾಫಿ ನಾಶವಾಗುತ್ತದೆ. ಇದರಿಂದ ದೇಶಕ್ಕೂ ನಷ್ಟ, ಕಾರ್ಮಿಕರಿಗೂ ನಷ್ಟ, ಮಾಲೀಕರಿಗೂ ನಷ್ಟವಾಗುತ್ತದೆ. ಈ ರೀತಿ ಮಾಡುವುದರಿಂದ ಬಹಳ ತೊಂದರೆಯಾಗುತ್ತದೆ ಕಾರ್ಮಿಕರಿಗೆ ತೊಂದರೆ

ಕೊಡಬೇಕೆನ್ನುವುದು ಸರ್ಕಾರದ ಉದ್ದೇಶವಲ್ಲ. ಈ ಒಂದು ಕಾನೂನನ್ನು ಹಿಂದಿನ ಸರ್ಕಾರವೇ ತಂದಿತ್ತು. ಆದರೆ ಇದನ್ನು ಆ ಸರ್ಕಾರ ಏತಕ್ಕೆ ಜಾರಿಗೆ ತರಲಿಲ್ಲವೊ ಅದು ನನಗೆ ಗೊತ್ತಿಲ್ಲ. ಇವತ್ತು ಯಾವ ಪಕ್ಷದವರೇ ಸರ್ಕಾರವನ್ನು ನಡೆಸುತ್ತಾ ಇರಲಿ, ಹಿಂದೆ ಸಾವಿರಾರು ವರ್ಷಗಳ ಕಾಲ ರಾಜರುಗಳು, ಚಕ್ರವರ್ತಿಗಳು, ಸುಲ್ತಾನರುಗಳು ರಾಷ್ಟ್ರವನ್ನು ಆಳಿದರು. ಈಗ ಪ್ರಜಾಪ್ರಭುತ್ವ ಯುಗದಲ್ಲಿ ನಾವಿದ್ದೇವೆ. ಯಾವ ಸರ್ಕಾರವೇ ಇರಲಿ, ಅದು ದೇಶದ ಭದ್ರತೆಯನ್ನು ಕಾಪಾಡಿಕೊಂಡು ದೇಶವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಬೇಕು ಸಾರ್ವಜನಿಕರ ಹಿತರಕ್ಷಣೆಗಾಗಿ ಸರ್ಕಾರ ಇರಬೇಕು. ಆದ್ದರಿಂದಲ್ಲೇ ನಾವು ಈ ಕಾನೂನನ್ನು ತರುತ್ತಿರುವುದು. ಪರಿಶೀಲನೆಗಾಗಿ ಇಟ್ಟಿದ್ದೇವೆ. ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಸಲಹೆಗಳೆಲ್ಲಾ ತಪ್ಪು ಎಂದು ಹೇಳುವುದಿಲ್ಲ. ಮಾನ್ಯ ಆರ್ಮುಗಂ ಅವರು ಹೇಳಿದರು. He also comes from the labour-dominated constituency i.e., K.G.F. He was telling me the other day–KGF is losing its identity; the labour unrest is there; The Management is not taking keen interest; and the KGF labourers are completely losing their jobs. What should we do ? He himself was explaining to me. Is it not so, Mr. Arumugham ? ಆದುದರಿಂದ ನಾನು ಹೇಳುತ್ತಿದ್ದೇನೆ. ಈ ಕಾನೂನನ್ನು ಪಾಸ್ ಮಾಡಬೇಕು. ಮತ್ತು ಇದನ್ನು ಸರ್ಕಾರವೇ ಅಲ್ಲ ತಾವೂ ಕೂಡ ಒಪ್ಪಿಕೊಳ್ಳಬೇಕು. ಇದು ಪ್ರಜಾಪ್ರಭುತ್ವದ ಪ್ರಶ್ನೆಯಲ್ಲ ಅದರೆ ಇವತ್ತಿನ ದಿವಸ ಶ್ರೀಮಾನ್ ಬೊಮ್ಮಾಯಿಯವರು, ಶ್ರೀ ದೇವೇಗೌರವರು, ಆರ್ಮುಗಂ ಅವರು, ಶ್ರೀ ಕಕ್ಕಿಲಾಯ ಅವರು, ಅನೇಕ ಜನರು ಶ್ರೀ ಗಂಗಾಧರನ್ ಅವರು ಹಾಗೂ ಶ್ರೀಮತಿ ಪುಷ್ಪಾಲಾ ಅವರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ ಶ್ಲೋಕ ಅದು ಹಿಂದಿನಕಾಲಕ್ಕೆ ಹೋಯಿತು ಅದು ಈ ಕಾಲಕ್ಕೆ ಅನ್ವಯವಾಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ ನಾನು ಎಲ್ಲ ವಿರೋಧ ಪಕ್ಷದ ಸದಸ್ಯರನ್ನೂ ಮತ್ತು ನಾಯಕರನ್ನೂ ಕೇಳಿಕೊಳ್ಳುವುದೇನೆಂದರೆ...ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಏತಕ್ಕೋ ಮಾತನಾಡುತ್ತಲೇ ಇಲ್ಲ, ಅವರಿಗೆ ಏನೋ ತೊಂದರೆಯಾಗಿರಬಹುದು ಎಂದು ಕಾಣುತ್ತದೆ, ಕಳೆದಸಾರಿ ಅಸೆಂಬ್ಲಿಯಲ್ಲಿ ಬಹಳ ಆಕ್ಟಿವ್ ಆಗಿ ಇದ್ದರು, ಈವಾಗ ಏಕೋ ಬಹಳ ಡಲ್ ಆಗಿದ್ದಾರೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ.--ಮಾತನಾಡುವ ಸಮಯ ಬಂದಾಗ ಮಾತನಾಡುತ್ತೇನೆ. ಮಾತನಾಡಲು ಅಂಥ ಸಮಸ್ಯೆ ಏನೂ ಇಲ್ಲ.

ಶ್ರೀ ಆರ್. ಗುಂಡೂರಾವ್.--ಇದಕ್ಕಿಂತ ಸಮಸ್ಯೆ ಏನು ಬೇಕು. ತಾವು ಏನೂ ಯೋಚನೆ ಮಾಡಬೇಡಿ. ಅಧ್ಯಕ್ಷರೆ ಮಾನ್ಯ ಸದಸ್ಯರು ಸಲಹೆ ಮಾಡಿದ ಪ್ರಕಾರ ನಾನು ಈ ಮಸೂದೆಯನ್ನು ಈಪತ್ತೇ ಪಾಸ್ ಮಾಡಬೇಕು ಎಂದು ಕೇಳುತ್ತಿಲ್ಲ. ಮಾನ್ಯ ಸದಸ್ಯರು ಇದನ್ನು ಪಬ್ಲಿಕ್ ಒಪಿನಿಯನ್‌ಗೆ ಕಳುಹಿಸಿಕೊಡಬೇಕೆಂದು ಹೇಳಿದರು. ಪಬ್ಲಿಕ್ ಒಪಿನಿಯನ್‌ಗೆ ಕಳುಹಿಸಿಕೊಡಲೇಬೇಕು ಎನ್ನುವುದು ಯಾವ ವಿದವಾದ ಸಂಪ್ರದಾಯವೂ ಇಲ್ಲ. ಇದು ಪ್ರತಿಷ್ಠೆಯ ಪ್ರಶ್ನೆ ಎಂದು ಕುಳಿತುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ರಾಜ್ಯದಲ್ಲಿರುವ ಜನರಿಗೆ ತೊಂದರೆಯನ್ನು ತಪ್ಪಿಸಬೇಕು, ಅದರಲ್ಲೂ ಯಾವ ಜನಾಂಗಕ್ಕೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಒಂದು ಸಮಗ್ರವಾದ ಕಾನೂನನ್ನು ತರಬೇಕೆಂದು ಮನಸ್ಸಿನಲ್ಲಿಟ್ಟುಕೊಂಡು ಈ ಒಂದು ಕಾನೂನನ್ನು ತಂದಿದ್ದೇವೆಯೇ ಹೊರತು ಬೇರೆಯಾವ ಕಾರಣವೂ ಇಲ್ಲವೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ಉತ್ತಮವಾದ ಸಲಹೆಗಳನ್ನು ಕೊಡಬೇಕು, ಪ್ರಧಾನವಾಗಿ ಮಾನ್ಯ ಸದಸ್ಯರಾದ ಬಿ. ವಿ. ಕಕ್ಕಿಲಾಯರವರು ಈ ವಿಷಯವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಬೇಕೆಂದು ಹೇಳಿರುತ್ತಾರೆ ಇದಕ್ಕೆ ನಾನಾದರೂ ಹೇಳುವುದೇನೆಂದರೆ ಇದು ಸರ್ಕಾರದ ಪ್ರತಿಷ್ಠಿತ ಪ್ರಶ್ನೆಯಲ್ಲ, ಇದು ಎಲ್ಲರಿಗೂ ಸೇರಿದಂಥ ಪ್ರಶ್ನೆಯಾಗಿದೆ, ಆದ್ದರಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲು ತಯಾರಾಗಿದ್ದೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಚರ್ಚೆ ಮಾಡಿ, ತೀರ್ಮಾನಮಾಡಿ ಆವರು ವರದಿಯನ್ನು ಕೊಡಲಿ, ಸರ್ಕಾರದ ಉದ್ದೇಶ ಏನೆಂದರೆ ನಾಗರೀಕರ ಮತ್ತು ಕಾರ್ಮಿಕರ ಹಿತರಕ್ಷಣೆಯನ್ನು ಮಾಡಬೇಕೆಂದೇ ಇರುತ್ತದೆ. ಆವರ ಕೈಯಲ್ಲಿರುವ ಅಧಿಕಾರವನ್ನು ಕಿತ್ತುಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕೆ ಎಂದಿಗೂ ಇಲ್ಲ. ಮಾನ್ಯ ವಿರೋಧಪಕ್ಷದ ಸದಸ್ಯರು ಏನು ಒಂದು ಅಮೆಂಡ್‌ಮೆಂಟ್ ತಂದಿರುತ್ತಾರೆ ಅದನ್ನು ಸರ್ಕಾರ ಒಪ್ಪಿಕೊಳ್ಳುವುದಕ್ಕೆ ತಯಾರಾಗಿದೆ. ಆದ್ದರಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟು

ಮುಂದಿನ ಅಧಿವೇಶನದಲ್ಲಿ ಸೆಲೆಕ್ಟ್ ಕಮಿಟಿಯವರು ಏನು ವರದಿಯನ್ನು ಕೊಡುತ್ತಾರೆ. ಯಾವರೀತಿ ಸಲಹೆಗಳನ್ನು ಕೊಡುತ್ತಾರೆ ಆ ಎಲ್ಲ ಸಲಹೆಗಳನ್ನು ಪಡೆದು ಸರ್ಕಾರ ಮುಂದೆ ಯಾವರೀತಿ ತರಬೇಕು ಎನ್ನುವುದನ್ನು ಯೋಚನೆ ಮಾಡುತ್ತದೆಂದು ಹೇಳಿ ಮಾನ್ಯ ಬೊಮ್ಮಾಯಿಯವರು ತಂದಿರತಕ್ಕಂಥ ಈ ಅಪೆಂಡ್‌ಮೆಂಟನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆಂದು ಹೇಳುತ್ತಾ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲು ಯಾವ ವಿರೋಧವಿಲ್ಲವೆಂದು ಸರ್ಕಾರದ ಪರವಾಗಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲು ಮನಸ್ಸು ಮಾಡಿದೆ ಎಂದು ಹೇಳಿದ ಮೇಲೆ ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಈ ವಿಷಯವನ್ನು ಕಳುಹಿಸಲಿ ಎಂದು ಹೇಳುತ್ತೇನೆ.

MR. SPEAKER.—Now I will put the motion to the vote of the House. The question is...

SRI M. VEERAPPA MOILY.—Mr. Speaker, Sir, now th t it has been decided to refer the Bill to a Joint Select Committee, the Government will move the motion tomorrow along with the names of the members to be included in the Joint Select Committee.

MR. SPEAKER.—You can move the motion tomorrow. Now I have an announcement to make.

ANNOUNCEMENT

MR SPEAKER.—I have received a letter dated 11th April 1980 from Sri M. Srinivas, Member, L gi lative Assembly of the Janata Party stating that he has resigned from the Janata Party and joined Congress (I) Legislature Party. I have also received a letter dated 2nd May, 1980 from the Deputy Leader of the Karnataka Legislature Congress (I) Party stating that Sri M. Srinivasa has been admitted to their party.

Arrangements will be made to change the seat of Sri M. Srinivas.

Now the House stands adjourned to meet again tommorrow at 9-00 A.M.

The House adjourned at Fifty five Minutes past Six of the Clock to meet again on Wednesday 7th May, 1980 at Nine of the Clock.